# ಮಳೆ

ಮನುಷ್ಯರ ಪಾಲಿಗೆ ಮಳೆಯೆನ್ನುವುದು ಬಯಲಿನಲ್ಲಿ ಸುರಿಯುವ ಪ್ರಾಕೃತಿಕ ಕ್ರಿಯೆ. ನಾವು ಅಂಗಳದಲ್ಲಿ ನಿಂತೋ ಕೋಣೆಯೊಳಗಿನ ಕಿಟಕಿಯಿಂದಲೋ ಮಳೆಯನ್ನು ನೋಡಬಲ್ಲೆವು. ಮಳೆ ಮತ್ತು ನಮ್ಮ ನಡುವೆ ಅಂತರವಿದೆಯಷ್ಟೇ. ಅದು ನಾವೇ ಸೃಷ್ಟಿಸಿಕೊಂಡಿರುವ ಅಂತರ. ಕಂದರವೆಂದರೂ ಸರಿಯೇ. ಮನೆಯಿಂದ ಹೊರಗಿದ್ದಾಗ ಮಳೆ ಸುರಿದರೆ ನಮ್ಮ ಫಜೀತಿ ಹೇಳತೀರದು. ನಾಲ್ಕು ಹನಿ ಉದುರಿದರೆ ಸಾಕು, ಮೈ ಒದ್ದೆಯಾದೀತೆಂದು ಸೂರು ಹುಡುಕುತ್ತ ಪುತಪುತನೆ ಓಡುತ್ತೇವೆ. ಕೊಡೆ ಹಿಡಿದು ನಡೆಯುತ್ತೇವೆ. ಮಳೆ ಹನಿಗಳ ರಾಡಿ ಬಟ್ಟೆಗೆ ಸಿಡಿದೀತೆಂದು ಮೈಯೆಲ್ಲ ಕಣ್ಣಾಗಿ ನಡೆಯುತ್ತೇವೆ. ಆದರೆ, ಮಳೆಗೆ ಇದಾವುದರ ಪರಿವೆಯೂ ಇಲ್ಲ. ಅದು ನಮ್ಮಿಂದ ದೂರ ಓಡುವುದಿಲ್ಲ. ಎಲ್ಲವನ್ನೂ ಎಲ್ಲರನ್ನೂ ಒಳಗೊಳ್ಳುವುದು ಮಳೆಯ ರೀತಿ.

ಯೋಚಿಸಿ ನೋಡಿ, ಮಳೆ ಹೊರಗಿನ ಪ್ರಕ್ರಿಯೆಯಷ್ಟೇ ಅಲ್ಲ, ಒಳಗಿನದೂ ಹೌದು. ಮಳೆ ಒಳಗೂ ಸುರಿಯುತ್ತದೆ. ಹೊರಗಿನ ಮಳೆಯ ಏರುಪೇರಿಗಿಂತಲೂ ಒಳಗಿನ ಮಳೆ ಹೆಚ್ಚು ಸೂಕ್ಷ್ಮವಾದುದು. ಹೃದಯದ ಬಯಲಿನಲ್ಲಿ ನಿತ್ಯ ವರ್ಷಧಾರೆ ಆಗುತ್ತಿರಲೇಬೇಕು. ಅಂತರಂಗ ಆರ್ದ್ರತೆ ಕಳೆದುಕೊಂಡರೆ, ಅದರ ಬಿಸಿ ವ್ಯಕ್ತಿಗಿಂತಲೂ ಸಮಾಜಕ್ಕೆ ಹೆಚ್ಚು ತಾಕುತ್ತದೆ. ಅಂತರ್ಜಲ ಎನ್ನುತ್ತೇವಲ್ಲ, ಮನುಷ್ಯನಿಗೆ ಸಂಬಂಧಿಸಿದಂತದು ಅಂತಃಕರಣ. ಅಂತರ್ಜಲಕ್ಕೆ ಮಳೆಯೇ ಆಧಾರ. ಅಂತಃಕರಣಕ್ಕೂ ಮಳೆಯೇ ಬೇಕು. ಆ ಮಳೆಯನ್ನು ನಾವು ಪ್ರಜ್ಞಾಪೂರ್ವಕವಾಗಿ ರೂಪಿಸಿಕೊಳ್ಳುತ್ತಿರಬೇಕು.

ಮನುಷ್ಯನಾಗಲಿಕ್ಕೆ ಜೀವನವಿಡೀ ಪ್ರಯತ್ನಿಸುತ್ತಿರುತ್ತೇವೆ ಎನ್ನುವ ಮಾತಿದೆ. ಹಾಗೆ ಮನುಷ್ಯನಾಗುವ ಪ್ರಯತ್ನದಲ್ಲಿ ಎದೆಯೊಳಗೆ ಮಳೆ ಸುರಿಯುತ್ತದೆ. ಎದೆ ಒದ್ದೆಯಾಗಿದ್ದಾಗ ವ್ಯಕ್ತಿಯೂ ಮೆದುವಾಗಿರಬಲ್ಲ, ಸಮಾಜಕ್ಕೆ ಪ್ರಯೋಜನಕಾರಿ ಆಗಬಲ್ಲ.

ಮಳೆಯೆಂದರೆ ಇರುಸುಮುರುಸಾಗುವುದು ಮನುಷ್ಯನಿಗೆ ಮಾತ್ರ. ಜೀವರಾಶಿಗೆ, ಪ್ರಕೃತಿಗೆ ಮಳೆಯೆಂದರೆ ಹಬ್ಬದ ಸಂಭ್ರಮ. ಮಳೆ ಸುರಿದು ನಿಂತ ಮೇಲೆ ವರ್ಷಧಾರೆಯ ಸದ್ದು ಅನುಕರಿಸುವಂತೆ ಕೀಟಜಗತ್ತಿನ ಸಂಗೀತ ಕಛೇರಿ ಶುರುವಾಗುತ್ತದೆ. ಯಾವ ಕೀಟವೋ ಅದೆಂಥ ಸದ್ದೋ – ಪ್ರಕೃತಿಯೆಂಬುದು ಅಗಣಿತ ಅಚ್ಚರಿಗಳ ಅಕ್ಷಯಪಾತ್ರೆ. ಮಳೆ ಬಿದ್ದ ಇರುಳು ಕೀಟವಿದ್ವಾಂಸರ ಸಂಗೀತ ಕಛೇರಿಗೆ ಕಿವಿಕೊಟ್ಟು, ನಂತರದ ಬೆಳಗನ್ನು ಗಮನಿಸಿ: ಅದೆಂಥ ಪ್ರಸನ್ನತೆ! 'ಯಾರಿಲ್ಲಿಗೆ ಬಂದರು ಕಳೆದಿರುಳು, ಏ ಗಾಳಿ, ಆ ಕಥೆಯನೊರೆದು ಮುಂದಕೆ ತೆರಳು' ಎಂದು ಕವಿ ಯರ್ಮುಂಜ ರಾಮಚಂದ್ರರ ಸಾಲಿದೆಯಲ್ಲ, ಆ ಕವಿಸಮಯವನ್ನು ಮಳೆಗಾಲದ ಬೆಳಗು ಎಲ್ಲರಿಗೂ ಕರುಣಿಸುವಂತಿರುತ್ತದೆ.

ಅಮೃತಬಿಂದುಗಳಿಂದ ತೋಯ್ದು ಎಲೆ ಎಲೆಯಲ್ಲೂ ಜೀವಸಂಚಾರ. ಬಣ್ಣಗಳನ್ನು ಮುಕ್ಕಳಿಸುವ ಹೂಗಳ ಮೋರೆಯಲ್ಲಿ ಮುಗುಳುನಗೆ. ಮಣ್ಣಮರೆಯ ಬೇರುಗಳೂ ನಗುತ್ತಿರಬೇಕು. ಮಣ್ಣಂತೂ ತನ್ನ ಬಿಗು ಕಳೆದುಕೊಂಡು ಮಾತೃಶಕ್ತಿಯ ಪರಿಮಳ ಸೂಸುತ್ತಿದೆ. ಕವಿಯಾಗಲಿಕ್ಕೆ ಇವೆಲ್ಲ ಭಾವ–ಬಣ್ಣಗಳು ಸಾಲವೆ?

ಪ್ರಕೃತಿಯ ಎಲ್ಲ ಘಟಕಗಳೂ ಮಳೆಯನ್ನು ಒಡಲು ತುಂಬಿಕೊಳ್ಳಲು ಹಂಬಲಿಸುತ್ತವೆ. ಮಣ್ಣಿಗೋ ಹಿಂಗದ ದಾಹ, ತೀರದ ಮೋಹ. ಗಿಡಮರಗಳು ಮೈಯೆಲ್ಲ ಬಾಯಾಗುತ್ತವೆ. ಹೊಳೆತೊರೆಗಳು ಮಳೆಯಿಂದ ಮೈದುಂಬಿಕೊಂಡು ಕಂಗೊಳಿಸುತ್ತವೆ. ಮನುಷ್ಯನಷ್ಟೇ ಮಳೆಯ ಲಾಭ–ನಷ್ಟದ ಬಗ್ಗೆ ಯೋಚಿಸುವುದು.

ಮಳೆ ಸೌಂದರ್ಯದ ಬಗ್ಗೆ ನಮ್ಮ ರಸಿಕತೆ ಅಷ್ಟಕ್ಕಷ್ಟೇ. ಮಳೆಯಿಂದ ನಾವು ಮೈಮರೆಸಿಕೊಳ್ಳುವುದು ಮಾತ್ರವಲ್ಲ, ಪ್ರಕೃತಿಗೂ ಮಳೆಗೂ ನಡುವೆ ಗೋಡೆಗಳನ್ನು ನಿರ್ಮಿಸುತ್ತೇವೆ. ಮಣ್ಣು ಕಂಡಲ್ಲೆಲ್ಲ ಡಾಂಬರನ್ನೋ ಕಾಂಕ್ರೀಟನ್ನೋ ಸುರಿಯುವುದೇ ನಾಗರಿಕತೆ ಎಂದಾಗಿದೆ. ನಗರಗಳನ್ನು 'ಕಾಂಕ್ರೀಟ್ ಕಾಡು' ಎನ್ನುತ್ತೇವೆ. ನಿಜವಾದ ಕಾಂಕ್ರೀಟೀಕರಣ ನಡೆದಿರುವುದು ಮನಸ್ಸುಗಳಲ್ಲಿ. ಎದೆಗೂಡುಗಳು ಕಾಂಕ್ರೀಟು ಗೂಡುಗಳಾಗಿರುವ ವಿಷಮ ಸನ್ನಿವೇಶ ಇಂದಿನದು.

ಮಳೆ ಬಿದ್ದಲ್ಲಿಯೇ ಮಣ್ಣು ಸೇರುವುದು ಪ್ರಕೃತಿಧರ್ಮ. ಮಣ್ಣು ನೀರುಂಡು ತಣಿದಾಗ ಮಳೆ ಹೊಳೆಯಾಗುತ್ತದೆ, ಚಲನಶೀಲವಾಗುತ್ತದೆ, ಅಂತರ್ಜಲದ ಜೊತೆಗೆ ಬಹಿರಂಗ ಜಲವೂ ಆಗುತ್ತದೆ. ನಾಗರಿಕತೆಯ ಹಸ್ತಕ್ಷೇಪದ ಕಾರಣದಿಂದಾಗಿ ಮಳೆನೀರು ಮಣ್ಣಿನ ಸಖ್ಯದಿಂದ ವಂಚಿತವಾಗುತ್ತಿದೆ. ಹೊಳೆಗಳು ಚಹರೆ ಕಳೆದುಕೊಂಡು ನಾಗರಿಕರು ಕಟ್ಟಿದ ಮೋರಿಗಳೇ ಹೊಳೆಗಳ ರೂಪು ಪಡೆದುಕೊಂಡು ಮನೆಗಳಿಗೂ ಇಣುಕುತ್ತವೆ. ಹೊಲಗದ್ದೆಗಳಿಗೆ ಮಳೆನೀರು ಹೊಳೆನೀರು ನುಗ್ಗಿ, ಬದುಕು ಮೂರಾಬಟ್ಟೆಯಾಗುತ್ತದೆ. ಈ ದುರಂತವನ್ನು ಮಳೆಯಿಂದ ಆದ ಹಾನಿ ಎನ್ನುತ್ತೇವೆ. ಮಳೆಯೇನೂ ಬೇಸರಿಸಿಕೊಳ್ಳುವುದಿಲ್ಲ. ಸುರಿಯುವುದಷ್ಟೇ ಅದಕ್ಕೆ ಗೊತ್ತು. ಲಾಭ–ನಷ್ಟದ ಗಣಿತ ನಮಗೆ ಸಂಬಂಧಿಸಿದ್ದಷ್ಟೇ.

ಬದಲಾವಣೆ ಮನುಷ್ಯಸಹಜ ಗುಣ. ಎಲ್ಲದರಲ್ಲೂ ನಮಗೆ ಬದಲಾವಣೆ ಬೇಕು. ಈ ಬದಲಾವಣೆಗೆ, ಮಳೆ ನೀರನ್ನು ನಾವು ನೋಡುವ ನೋಟದಲ್ಲಿ, ಒಳಗೊಳ್ಳುವ ವಿಧಾನದಲ್ಲಿ ಬೇಡವೆ? ಖಂಡಿತ ಬೇಕು. ಬೇರೇನೂ ಬೇಡ. ಮಳೆ ಸುರಿಯುವಾಗ ಒಮ್ಮೆ ಕಿವಿಗೊಟ್ಟು ಆಲಿಸಿ. ಮುಗಿಲಿನ ಯಾವುದೋ ಊಹಾತೀತ ತುದಿಯಿಂದ ಮಳೆಹನಿಗಳು ಲಯಬದ್ಧವಾಗಿ ಮಣ್ಣಸೇರುವ ಸದ್ದಿಗೆ ಸಂಗೀತದ ಗುಣವಿದೆ. ಅದು ಬರಿಯ ಸಂಗೀತವಲ್ಲ – ಪ್ರಾರ್ಥನೆಯಂತೆಯೂ ಏಕತಾನ ಧ್ಯಾನದಂತೆಯೂ ಕಾಣಿಸುತ್ತದೆ. ಮಳೆಯ ಸದ್ದಿಗೇ ಇಷ್ಟು ಮಾಂತ್ರಿಕತೆ ಇರುವಾಗ, ಅದರ ಸ್ಪರ್ಶಕ್ಕೆ ಇನ್ನೆಷ್ಟು ಮಾಯಕ ಶಕ್ತಿಯಿರಬೇಕು. ಮಳೆ ಮಾಯಿಯಷ್ಟೇ ಅಲ್ಲ, ಮದ್ದೂ ಹೌದು. ಮಳೆ ಮತ್ತು ನಮ್ಮ ನಡುವೆ ಇರುವ ಕವಾಟಗಳನ್ನು ಒಂದೊಂದೇ ಸರಿಸುತ್ತಾ ಹೋದಂತೆ, ಮಳೆ ಮತ್ತು ನಮ್ಮ ನಡುವೆ ಅಂತರ ಕಡಿಮೆಯಾಗುತ್ತಾ ಹೋದಂತೆ, ನಾವು ಪ್ರಕೃತಿಗೆ ಹತ್ತಿರವಾಗುತ್ತಾ ಹೋಗುತ್ತೇವೆ. ಪ್ರಕೃತಿಗೆ ಹತ್ತಿರವಾಗುವುದೆಂದರೆ, ಮತ್ತಷ್ಟು ಮಾನವೀಯವಾಗುವುದೇ ಆಗಿದೆ.

**■ ಚಂಪಕಮಾಲಾ**

## ಮಾತೇ ಮುತ್ತು

- ಜಗತ್ತಿನಲ್ಲಿ ಹೇಳುವವರಿಗಿಂತ, ಹೇಳಿದಂತೆ ನಡೆಯುವವರ ಯೋಗ್ಯತೆ ಹೆಚ್ಚಿನದು.
  –ಗಳಗನಾಥ
- ಕ್ಷಮಿಸುವುದು ಉತ್ತಮ. ಮರೆತುಬಿಡುವುದು ಸರ್ವೋತ್ತಮ.
  –ರಾಬರ್ಟ್ ಬ್ರೌನಿಂಗ್
- ಮೌನ ಅನಂತದಷ್ಟು ಆಳವಾದದ್ದು. ಮಾತು ಕಾಲದಷ್ಟು ಕ್ಷಣಿಕ.
  –ಥಾಮಸ್ ಕಾರ್ಲೈಲ್
- ಸತ್ಯಕ್ಕಾಗಿ ಯಾವುದನ್ನಾದರೂ ತ್ಯಾಗ ಮಾಡಿ. ಆದರೆ ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ.
  –ಸ್ವಾಮಿ ವಿವೇಕಾನಂದ
- ಲೋಕದಲ್ಲಿ ಯಾವ ಮಾನವನೂ ಪೂರ್ಣ ಸುಖಿಯೂ ಅಲ್ಲ. ಪೂರ್ಣ ದುಃಖಿಯೂ ಅಲ್ಲ.
  –ಗೌತಮ ಬುದ್ಧ
- ರೂಪ ಕಣ್ಣುಗಳಿಗೆ ಸೀಮಿತ. ಗುಣ, ಆತ್ಮದವರೆಗೆ ತಲುಪುವ ಸಾಧನ.
  –ತ್ರಿವೇಣಿ
- ಕೊಟ್ಟು ಕೆಟ್ಟವರಿಲ್ಲ, ತಿಂದು ಬದುಕಿದವರಿಲ್ಲ. ಕೊಟ್ಟು ಕದಿಯಲು ಬೇಡ, ಕೊಟ್ಟಾಡಿಕೊಳಬೇಡ.
  –ಸರ್ವಜ್ಞ
- ಹಣಕ್ಕೆ ಕೈ, ಕಾಲುಗಳಿದ್ದಂತೆ ಉಪಯೋಗಿಸಿ, ಇಲ್ಲವೇ ಕಳೆದುಕೊಳ್ಳಿ.
  –ಹೆನ್ರಿ ಫೋರ್ಡ್
- ನಿಮ್ಮ ಮುಖವನ್ನು ಯಾವತ್ತೂ ಸೂರ್ಯನಿಗೆ ಅಭಿಮುಖವಾಗಿಟ್ಟುಕೊಳ್ಳಿ. ನೆರಳು ಹಿಂದಕ್ಕೆ ಸರಿಯುತ್ತದೆ.
  –ವಾಲ್ಟ್ ವಿಟ್ಮನ್
- ಜಾತಿವಿಡಿದು ಸೂತಕವನರಸುವೆ. ಜ್ಯೋತಿವಿಡಿದು ಕತ್ತಲೆಯನರಸುವೆ. ಇದೇಕೋ ಮಣಿ ಎಂಬುದು ವಚನ, ನಮ್ಮ ಕೂಡಲಸಂಗನ ಶರಣರ ಪಾದ ಪುರುಷನ ನಂಬು.
  –ಬಸವಣ್ಣ